ಹೂ ಮುಡಿಯಲು ಅಂದೂ ಆಸೆಯಿರಲಿಲ್ಲ ಈಗಲೂ ಏನು ಅನ್ನಿಸೋಲ್ಲ. ಕೊನೆಗೆ ಅಕ್ಕಂದಿರ ಅಥವಾ ಅತ್ತೆಯ ಮನೆಗೆ ಯಾವಾಗಲೊಮ್ಮೆ ಹೋದರೂ ವಿಪರೀತ ದುಃಖವಾಗುತ್ತೆ. ಅವನು ದೂರವಿದ್ದಾಗ ಇಲ್ಲದ ಗಿಲ್ಟ್, ಈಗ ಕಾಡುವುದು.

ಮಗ್ಗುಲು ಬದಲಿಸಿದೆ.

ಮಾನಸಿ ಅಷ್ಟು ಪ್ರೀತಿಯಿಂದ ಕರೆದಿರುವಾಗ ಹೋಗಬಹುದು. ಅವರ ಚಿಕ್ಕಪ್ಪ ಎಷ್ಟೇ ಆಗಲಿ ನನಗೆ ಅನ್ನದ ದಾರಿ ತೋರಿಸಿದವರು. ಅಲ್ಲೊಂದು ಕೃತಜ್ಞತೆ ಸಲ್ಲಿಸಿದಂತೂ ಆಗುತ್ತದೆ. ಶ್ರೀಲೋಲ ಬಂದಿದ್ದಾನೆ ಅಂತ ಬೇರೆ ಹೇಳಿದ್ದಾಳೆ. ಕಾಲೇಜಿನಲ್ಲಿ ಒಂದು ವರ್ಷ ಸೀನಿಯರ್. ಮಾನಸಿಯ ದೂರದ ಬಳಗ. ಒಳ್ಳೆಯ ಕೆಲಸ, ಅಂತಸ್ತು ಎಲ್ಲ ಇದೆ. ಒಮ್ಮೆ ತೀವ್ರವಾಗಿ ಜ್ವರ ಬಂದು ಔಷಧಿಗಳ ಅಡ್ಡ ಪರಿಣಾಮ, ಎಡಗಿವಿ ಶಾಶ್ವತವಾಗಿ ಕೇಳಿಸದಾಗಿತ್ತು. ಅಲ್ಲಿಂದೀಚೆ ಮದುವೆಯ ಯೋಚನೆ ಬಿಟ್ಟಿದ್ದ. ಈಗ ಒಬ್ಬ ಸಂಗಾತಿಯ ಹುಡುಕಾಟ ನಡೆದಿತ್ತು. ವಿಧವೆ ವಿಚ್ಛೇದಿತೆಯಾದರೂ ಸರಿ, ತನ್ನನ್ನು ಅರ್ಥಮಾಡಿಕೊಳ್ಳುವಂತಿದ್ದರೆ ಸಾಕು ಎಂದಿದ್ದನಂತೆ. ಆ ಸಂದರ್ಭದಲ್ಲಿ ನನ್ನ ಪ್ರಸ್ತಾಪವಿಟ್ಟಿದ್ದಾಳೆ ಮಾನಸಿ.

***

ಮಲಗುವ ಮೊದಲು ಹಾಡು ಕೇಳುವ ಅಭ್ಯಾಸ. ಜಿಷ್ಣು ಕೊಡಿಸಿದ್ದ ಅಂಗೈಯಗಲದ ರೇಡಿಯೊದಲ್ಲಿ 'ಮ್ಯೂಸಿಕ್' ಎಂಬ ಆಯ್ಕೆಯೂ ಇತ್ತು. ನನಗೆ ಇಷ್ಟವಾಗುವ ಚಲನಚಿತ್ರೇತರ ಹಾಡುಗಳನ್ನು ಸಣ್ಣ ಚಿಪ್‌ನಲ್ಲಿ ರೆಕಾರ್ಡ್ ಮಾಡಿ ರೇಡಿಯೊ ಎಂಬ ಈ ಪುಟ್ಟ ಯಂತ್ರದಲ್ಲಿ ಅಳವಡಿಸಿ, 'ಈ ಚಿಪ್‌ನಲ್ಲಿ ಇನ್ನೂ ತುಂಬಾ ಜಾಗ ಇದೆ ಹೊಸತಾಗಿ ಯಾವುದಾದರು ಬೇಕು ಅನ್ನಿಸಿದರೆ ಹೀಗೆ ರೆಕಾರ್ಡ್ ಮಾಡಬೇಕು' ಅಂತ ಕಂಪ್ಯೂಟರ್‌ನಲ್ಲಿ ತೋರಿಸಿಕೊಟ್ಟಿದ್ದ. 'ಸದ್ಯಕ್ಕೆ ಇಷ್ಟುಸಾಕು' ಎಂದಿದ್ದೆ. ಸ್ವಿಚ್ಚನ್ನು ಎಫ್.ಎಂ ಮತ್ತು ಮ್ಯೂಸಿಕ್, ಹೀಗೆ ಬೇಕೆನ್ನಿಸುವ ಕಡೆಗೆ ನೂಕಿದರೆ ಸಾಕು. ಆಯ್ಕೆಗೆ ತಕ್ಕಂತೆ ಸುಲಭವಾಗಿ ಉಪಯೋಗಿಸಬಹುದಿತ್ತು. ರೇಡಿಯೊ ಎಂದರೆ ಈಗಲೂ ಒಂದೇ ನಿಲ್ದಾಣ– ವಿವಿಧ ಭಾರತಿ. ಸ್ವಿಚ್ಚನ್ನು ಮ್ಯೂಸಿಕ್‌ಗೆ ಬದಲಿಸಿದೆ. ದಾಸರಪದ ಬರುತ್ತಿತ್ತು 'ಅಪಮೃತ್ಯು ಪರಿಹರಿಸೋ ಅನಿಲ ದೇವ...' ಜಗನ್ನಾಥದಾಸರ ಗೀತೆ. ಇದನ್ನು ಅದೆಷ್ಟು ಬಾರಿ ಕೇಳಿದರೂ ಬೇಸರವಿಲ್ಲ. ಜೀವನದ ಕಷ್ಟಕೋಟಲೆಗಳೆಲ್ಲ ಅಪಮೃತ್ಯು ಎಂದೇ ಭಾವಿಸಬೇಕು. ಬವಣೆ ಬದುಕಲ್ಲಿ ಬಡಿದಪ್ಪುವಾಗ



ಭಗವಂತನ ಮೊರೆ ಹೋದರೆ ಯಾವುದೊ ಒಂದು ದಾರಿ ಗೋಚರಿಸುತ್ತದೆ. ಒಮ್ಮೊಮ್ಮೆ ತಿಳಿದ ಪರಿಹಾರವೇ ಆದರೂ ಹೊಳೆದಿರುವುದಿಲ್ಲ. ಅದೇಕೋ ಈ ಹಾಡು ನನ್ನನ್ನು ಬಹುವಾಗಿ ಕಲಕುವುದು ಉಂಟು. ನನ್ನ ಜೀವನದ ಕಹಿಘಟನೆಗಳೆಲ್ಲ